ಶ್ರೀ ಈ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)

ಅ) ಹುಣಸೂರು ಸುತ್ತ ಮುತ್ತಲ ಪ್ರದೇಶಗಳಲ್ಲಿ ಕಾಡಾನೆಗಳಿಂದ ಬೆಳೆ ನಾಶವಾದ ಪ್ರಕರಣಗಳು ವರದಿಯಾಗಿವೆ.

ಆ) ಹುಣಸೂರು ಅರಣ್ಯ ವಿಭಾಗದಲ್ಲಿ ಆನೆಗಳ ಹಾವಳಿ ಹೆಚ್ಚಿರುವ ಕಡೆ 20 ಕಿಲೋಮೀಟರ್ ಆನೆ ತಡೆ ಕಂದಕಗಳನ್ನು ನಿರ್ಮಿಸಲಾಗಿದೆ. ತಿತಿಮತಿ ವಲಯದಲ್ಲಿ 4-5 ಕಿ.ಮೀ. ಉದ್ದ ಸೌರಶಕ್ತಿ ಬೇಲಿ ಹಾಕಲಾಗಿದೆ. ಮುಂದುವರೆದು ಧಾಂದಲೆ ಮಾಡುತ್ತಿರುವ ಆನೆಗಳನ್ನು ತಮಟೆ ಬಾರಿಸಿ ಹುಸಿಗುಂಡು ಹಾರಿಸಿ ಕಾಡಿನೊಳಗೆ ಅಟ್ಟಲಾಗುತ್ತಿದೆ.

ಇ) ನಷ್ಟ ಹೊಂದಿದ ರೈತರಿಗೆ ಸರ್ಕಾರಿ ಆದೇಶದ ನಿಯಾಮಾವಳಿಯಂತೆ ಪರಿಹಾರವನ್ನು ಸಂಬಂಧಪಟ್ಟವರಿಗೆ ನೀಡಲಾಗಿದೆ.

ಈ) 1989-90ನೇ ಸಾಲಿನಲ್ಲಿ ಕಾಡಾನೆಗಳಿಂದ ಬೆಳೆ ನಷ್ಟವಾದುದಕ್ಕೆ ಪ್ರಕರಣ 52 ರೂ. 25,600.00 ಮತ್ತು 1990-91 ಫೆಬ್ರವರಿ ಅಂತ್ಯದವರೆಗೆ 82 ಪ್ರಕರಣಗಳು ರೂ.60,903.00

ಕಾಡು ಪ್ರಾಣಿಗಳಿಂದ ತೊಂದರೆಗೊಳಗಾದ ರೈತರಿಗೆ ಪರಿಹಾರ

1606 – ಶ್ರೀ ಎಸ್. ಪ್ರಭಾಕರ ರಾಣೆ (ಕಾರವಾರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಡು ಪ್ರಾಣಿಗಳಿಂದ ರೈತರಿಗೆ ಆಗುವ ತೊಂದರೆ ಅಥವಾ ಹಾನಿಗಳಿಗೆ ಪರಿಹಾರ ನೀಡುವಲ್ಲಿ ಸರಕಾರ ಯಾವ ನೀತಿಯನ್ನು ಅನುಸರಿಸುತ್ತಿದೆ?

ಆ) ಕಾರವಾರ ಮತ್ತು ಸುಪಾ ತಾಲ್ಲೂಕಿನಲ್ಲಿ ಕಾಡು ಪ್ರಾಣಿಗಳಿಂದ ರೈತರ ದನಕರುಗಳಿಗೆ ಹಾಗೂ ಬೆಳೆಗಳಿಗೆ ಹಾನಿ ಆದ ಎಷ್ಟು ಪ್ರಕರಣಗಳು ಸರಕಾರದ ಗಮನಕ್ಕೆ ಬಂದಿವೆ?

ಇ) ಇಂಥ ಪ್ರಸಂಗಗಳಲ್ಲಿ ಸರ್ಕಾರ ಪೂರ್ಣ ಪ್ರಮಾಣದ ಪರಿಹಾರ ನೀಡದೆ ಇರಲು ಕಾರಣವೇನು?

ಶ್ರೀ ಈ.ಟಿ.ಶಂಭುನಾಥ್ (ಅರಣ್ಯ ರಾಜ್ಯ ಸಚಿವರು):

ಅ) ಕಾಡು ಪ್ರಾಣಿಗಳಿಂದ ರೈತರಿಗೆ ಆಗುವ ತೊಂದರೆ ಅಥವಾ ಹಾನಿಗಳಿಗೆ ಸರ್ಕಾರದ ಆದೇಶ ಸಂಖ್ಯೆ : ಹೆ ಹೆಚ್ ಎಫ್ ಎಫ್:22: ಎಫ್ ಡಬ್ಲೂ ಎಲ್ : 88 ದಿನಾಂಕ 29-6-89ರ ಪ್ರಕಾರ ರೈತರಿಗೆ ಆದ ನಷ್ಟದ ಪರಿಹಾರ ಹಣ ಮಂಜೂರು ಮಾಡಲಾಗುತ್ತಿದೆ.

ಆ) ರೈತರ ದನಕರುಗಳಿಗೆ ಹಾಗೂ ಬೆಳೆಗಳ ಹಾನಿಯಾದ ಪ್ರಕರಣಗಳಿಗೆ ಕಾರವಾರ ಮತ್ತು ಸೂಪಾ ತಾಲ್ಲೂಕಿನಲ್ಲಿ ಪರಿಹಾರ ಹಣ ಈ ಕೆಳಗಿನಂತೆ ಮಂಜೂರು ಮಾಡಲಾಗಿದೆ.

	1989-90		1990-91	
	ಪ್ರಕರಣ	ಹಣ ರೂ.	ಪ್ರಕರಣ	ಹಣ ರೂ.
ಕಾಡು ಪ್ರಾಣಿಗಳಿಂದ	222	142300-00	108	74800-00
ಬೆಳೆ ನಷ್ಟ	39	29405-00	35	27145

ಇ) ಇಂಥ ಪ್ರಸಂಗಗಳಲ್ಲಿ ಪರಿಹಾರ ಹಣ ಮಂಜೂರು ಮಾಡುವಾಗ ಅಧಿಕಾರಿಗಳಿಂದ ಪಂಚನಾಮೆ ಮಾಡಿ ಪರಿಹಾರ ಮೊತ್ತವನ್ನು ನಿಗಧಿಪಡಿಸುವುದು ಅಲ್ಲದೆ ಆಯಾ ಸಾಲಿನಲ್ಲಿ ಅನುಧಾನ ನೀಡಿದ ಪರಿಮಿತಿಯಲ್ಲಿಯೇ ಪರಿಹಾರ ಧನ ಮಂಜೂರು ನೀಡಲಾಗುವುದು.

ಹಾಲಿನ ಡೈರಿಗಳ ನಷ್ಟ

1453 - ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಡೈರಿಗಳು ಕಳೆದ ಮೂರು ವರ್ಷಗಳಿಂದ ನಷ್ಟ ಅನುಭವಿಸುತ್ತಿವೆ?

ಆ) ಈ ರೀತಿ ಡೈರಿಗಳು ನಷ್ಟ ಅನುಭವಿಸುತ್ತಿರಲು ಕಾರಣಗಳೇನು?

ಇ) ಈ ಡೈರಿಗಳು ಲಾಭದಾಯಕವಾಗಿ ನಡೆಯುವಂತಾಗಲು ಸರ್ಕಾರ ಏನು ಕ್ರಮ ತೆಗೆದುಕೊಳ್ಳಲಿದೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಸಚಿವರು):

ಅ) ಬೆಂಗಳೂರು, ಮೈಸೂರು, ತುಮಕೂರು, ಹಾಸನ, ಮಂಗಳೂರು, ಶಿವಮೊಗ್ಗ, ಗುಲ್ಬರ್ಗಾ, ದಾವಣಗೆರೆ, ಬೆಳಗಾವಿ, ಬಾಗಲಕೋಟೆ, ಬಳ್ಳಾರಿ ಡೈರಿಗಳು ಮತ್ತು ಹಾಲು ಉತ್ಪನ್ನ ಘಟಕ ಮಂಡ್ಯ ಮತ್ತು ಧಾರವಾಡ.

ಆ)

1. ಡೈರಿಗಳಲ್ಲಿನ ಯಂತ್ರಗಳು ಹಳೆಯದಾಗಿದ್ದು ಅವುಗಳ ಸಾಮರ್ಥ್ಯ ತೃಪ್ತಿಕರವಾಗಿಲ್ಲದಿರುವುದರಿಂದ ಹಾಗೂ ಕಡಿಮೆ ಸಾಮರ್ಥ್ಯದಿಂದ,
2. ಇಂಧನ, ಫಿಲಂ, ವಿದ್ಯುತ್ ಮತ್ತು ಇತರೆ ಅಗತ್ಯ ಸಾಮಗ್ರಿಗಳ ಬೆಲೆಯಲ್ಲಿ ಹೆಚ್ಚಳ
3. ಹಾಲು ಶೇಖರಣೆ ಮತ್ತು ವಿತರಣೆ ಸಾಗಾಣಿಕೆ ವೆಚ್ಚದಲ್ಲಿ ಹೆಚ್ಚಳ,
4. ಹಾಲು ಮಹಾ ಮಂಡಳಿ ಮತ್ತು ಒಕ್ಕೂಟಗಳು ಅಭಿವೃದ್ಧಿ ಚಟುವಟಿಕೆಗಳಿಗಾಗಿ ಸಾಲವಾಗಿ ಪಡೆದಿರುವ ಹಣದ ಮೇಲಿನ ಹೆಚ್ಚಿನ ಬಡ್ಡಿ.
5. ಸಿಬ್ಬಂದಿ ವೇತನದಲ್ಲಿ ಹೆಚ್ಚಳ ಇತ್ಯಾದಿ.

ಇ)

1) ಹಳೆಯ ಯಂತ್ರೋಪಕರಣಗಳ ಬದಲಾವಣೆ ಮತ್ತು ದುರಸ್ತಿ ಹಾಗೂ ಸಾಮರ್ಥ್ಯ ಹೆಚ್ಚಿಸುವುದು.
2) ಹಾಲು ಶೇಖರಣೆ ಮತ್ತು ಮಾರಾಟಗಳ ಪ್ರಮಾಣವನ್ನು ಹೆಚ್ಚಿಸಿ ಸಾಗಾಣಿಕೆ ವೆಚ್ಚ ಕಡಿಮೆ ಮಾಡುವುದು.
3) ಸಿಬ್ಬಂದಿ ಸೇವೆಯನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳುವುದು ಹಾಗೂ ಅಗತ್ಯಕ್ಕೆ ಅನುಗುಣವಾಗಿ ನೇಮಕಾತಿ ಮಾಡಿಕೊಳ್ಳುವುದು.

ರಾಜ್ಯದಲ್ಲಿ ಅರಣ್ಯಗಳಿಗೆ ಬೆಂಕಿಯಿಡುತ್ತಿರುವುದನ್ನು ತಪ್ಪಿಸುವುದು

1608 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?